ಮುಂಜಾವು

ವಾರಪತ್ರಿಕೆ.

ಸಂಪಾದಕ: ಸಿರಿಮನೆ ನಾಗರಾಜ್

ರಿಜಿಸ್ಟರ್ಡ್ ನಂ. ಕೆಆರ್‌ಎನ್‌ಎಸ್ -19

5ನೇ ವರ್ಷ 14ನೇ ಸಂಚಿಕೆ ಕೊಪ್ಪ 14-12-1986 ಭಾನುವಾರ ಬೆಲೆ 20 ಪೈಸೆ

'ಕಾರ್ಮಿಕರ ಕಿರುಕುಳ, ದೌರ್ಜನ್ಯದ ವಿರುದ್ಧ ಶಂಕರ್‌ಕಂಪೆನಿಗೆ ರೇಣುಕಾರಾಧ್ಯರ ಎಚ್ಚರಿಕೆ

ಚಿಕ್ಕಮಗಳೂರು: ಕೊಪ್ಪದ ಶಂಕರ್ ಸಾರಿಗೆ ಸಂಸ್ಥೆಯ ಆಡಳಿತ ವರ್ಗವು ನೌಕರರ ಸಂಘಟನೆ ಮುರಿಯಲು ನೌಕರರಿಗೆ ಹಲವಾರು ರೀತಿಯಲ್ಲಿ ಕಿರುಕುಳ ನೀಡುತ್ತಿರುವುದು ಮತ್ತು ದೈಹಿಕ ದೌರ್ಜನ್ಯವೆಸಗುತ್ತಿರುವುದನ್ನು ಎ.ಐ.ಟಿ.ಯು.ಸಿ. ಜಿಲ್ಲಾ ಪ್ರಧಾನ ಕಾರ್ಯದರ್ಶಿ ಮತ್ತು ಚಿಕ್ಕಮಗಳೂರು ಜಿಲ್ಲಾ ಟ್ರಾನ್ಸ್‌ಪೋರ್ಟ್ ಅಂಡ್ ಜನರಲ್ ಮಜ್ದೂರ್ ಸಂಘದ ನೂತನ ಪ್ರಧಾನ ಕಾರ್ಯದರ್ಶಿ ಎಚ್.ಎಂ. ರೇಣುಕಾರಾಧ್ಯ ಖಂಡಿಸಿ, ಇಂಥ ಕೃತ್ಯಗಳನ್ನು ನಿಲ್ಲಿಸದಿದ್ದಲ್ಲಿ ನೌಕರರಿಂದ ತೀವ್ರ ಚಳುವಳಿಯನ್ನು ಎದುರಿಸಬೇಕಾಗುತ್ತದೆಂದು ಎಚ್ಚರಿಸಿದ್ದಾರೆ.

ಚಿಕ್ಕಮಗಳೂರಿಗೆ ವರ್ಗಾಯಿಸಿರುವ ಸಂಘದ ಪ್ರಮುಖ ಕಾರ್ಯಕರ್ತರಲ್ಲೊಬ್ಬರಾದ ಸಂಜೀವ ಅವರನ್ನು ಒಪ್ಪಂದದಂತೆ ಹಿಂದಕ್ಕೆ ಕರೆಸಿಕೊಳ್ಳದೆ ಕ್ಷುಲ್ಲಕ ಕಾರಣಗಳನ್ನೊಡ್ಡಿರುವುದು ಮಾತ್ರವಲ್ಲದೆ ಆತನ ಮೇಲೆ ಇಲ್ಲ ಸಲ್ಲದ ಸುಳ್ಳು ಆರೋಪಗಳನ್ನು ಹೊರಿಸಿ ಪೋಲಿಸರಿಂದ ಕಿರುಕುಳಕ್ಕೊಳಪಡಿಸುವುದು ಮತ್ತು ಬಾಡಿಗೆ ಗೂಂಡಾಗಳ ಮೂಲಕ ಸಂಘವನ್ನು ಬಿಡುವಂತೆ ಬೆದರಿಕೆ ಹಾಕುವುದನ್ನು ಮುಂದುವರಿಸಿದ್ದಾರೆ ಎಂದು ರೇಣುಕಾರಾಧ್ಯ ಉಲ್ಲೇಖಿಸಿದ್ದಾರೆ.

ರಘುರಾಮ ಶೆಟ್ಟಿ ಎಂಬ ಡ್ರೈವರಿಗೆ ವಿನಾಕಾರಣ ಕೆಲಸ ನಿಲ್ಲಿಸುವ ನೋಟೀಸು ನೀಡಿ ಸಂಘಕ್ಕೆ ರಾಜೀನಾಮೆ ನೀಡುವಂತೆ ಒತ್ತಾಯಿಸುರುವುದು, ಚಂದ್ರಶೇಖರ್ ಎಂಬ ಡ್ರೈವರಿಗೆ ವಿನಾಕಾರಣ ಲೈನಿಂದ ಇಳಿಸಿ ಅಮಾನತ್ತಿನಲ್ಲಿಟ್ಟಿರುವುದು, ಚಿಕ್ಕೇಗೌಡ ಎಂಬ ನೌಕರನನ್ನು ಚಿಕ್ಕಮಗಳೂರಿನಿಂದ ಕೊಪ್ಪಕ್ಕೆ ಹಿಂದಕ್ಕೂ ಮುಂದಕ್ಕೂ ಎರಡೆರಡು ಬಾರಿ ವರ್ಗಾಯಿಸಿ, ಚೇಲಾಗಳಿಂದ ಒತ್ತಾಯಿಸಿ ಸಂಘಕ್ಕೆ ರಾಜೀನಾಮೆ ಬರೆಸಿಕೊಂಡಿರುವುದು, ಸುಧಾಕರ ಎಂಬ ನೌಕರನನ್ನು ಸದರಿ ಕಂಪನಿಗೆ ಸಂಬಂಧವಿಲ್ಲದ ಹಾಗೂ ಕಾನೂನು ರೀತ್ಯಾ ವರ್ಗಾವಣೆಗೆ ಅವಕಾಶವಿಲ್ಲದ ಅರವಿಂದ್ ಮೋಟಾರ್ಸ್‌ಗೆ ವರ್ಗಾಯಿಸಿರುವುದು– ಮುಂತಾದ ನೀತಿ–ನಿಯಮ ಬಾಹಿರವಾದ ಕ್ರಮಗಳನ್ನು ಆರಾಧ್ಯ ಖಂಡಿಸಿದ್ದಾರೆ.

ನೌಕರರನ್ನು ಬೆದರಿಸಿ ಸಂಘವನ್ನು ಒಡೆಯಲು ಯತ್ನಿಸುವುದು ಮತ್ತು ನೌಕರರ ಮಧ್ಯೆ ಅಶಾಂತಿ ಹರಡುವುದು – ಇದಕ್ಕಾಗಿಯೇ ಮಾಲೀಕರು ತಮ್ಮ ಚೇಲಾಗಳ ಒಂದು ಗುಂಪನ್ನು ಸಾಕಿಟ್ಟುಕೊಂಡಿರುವುದನ್ನು ಸಹ ಉದಹರಿಸುವ ರೇಣುಕಾರಾಧ್ಯ, ಈ ಎಲ್ಲ ಆಕ್ರಮಗಳ ಬಗ್ಗೆ ಸೂಕ್ತ ಕ್ರಮಕ್ಕಾಗಿ ಕೋರಿ ಕಾರ್ಮಿಕ ಅಧಿಕಾರಿಗಳಿಗೆ ತಿಳಿಸಲಾಗಿದ್ದು, ಮಾಲೀಕರ ಎಲ್ಲ ದೌರ್ಜನ್ಯ ಮತ್ತು ಕಿರುಕುಳವನ್ನು ಧೈರ್ಯದಿಂದ ಎದುರಿಸಲು ಕಾರ್ಮಿಕರು ನಿರ್ಧರಿಸಿರುವುದಾಗಿ ಪತ್ರಿಕಾ ಹೇಳಿಕೆಯಲ್ಲಿ ತಿಳಿಸಿದ್ದಾರೆ.

ನವೋದಯ ಶಾಲೆಗೆ ಆಯ್ಕೆಯಾದ ಕೊಪ್ಪ ತಾ|| ವಿದ್ಯಾರ್ಥಿಗಳು

ಕೊಪ್ಪ: ಬಾಳೆಹೊನ್ನೂರಿನ ಕೇಂದ್ರೀಯ ನವೋದಯ ಶಾಲೆಗೆ ಕೊಪ್ಪ ತಾಲ್ಲೂಕಿನ 9 ಮಂದಿ ವಿದ್ಯಾರ್ಥಿ–ವಿದ್ಯಾರ್ಥಿನಿಯರ ಹೆಸರುಗಳು, ಅವರ ತಂದೆಯ ಹೆಸರು ಮತ್ತು ಅವರ ಶಾಲೆ ಹೀಗಿವೆ:

1. ಅಭಿಷೇಕ್, 'ಅಸಗೋಡು ನಾಗೇಶ್, ಮೌಂಟನ್‌ವ್ಯೂ, ಚಿಕ್ಕಮಗಳೂರು; 2. ಲೋಹಿತ್, ಡಾಕಪ್ಪ, ಕುದುರೆಗುಂಡಿ; 3. ಸುಬ್ಬಲಕ್ಷ್ಮಿ, ಬಿ.ವಿ. ಶ್ರೀನಿವಾಸ, ಬಸರಿಕಟ್ಟೆ; 4. ರಾಘವೇಂದ್ರ ಉಡುಪ, ಎಚ್. ಎಲ್. ಉಡುಪ(ಶೆಡ್ಡಿಸಮನೆ). ಕೊಪ್ಪ; 5. ವಿನೋದ್ ಮೆಲ್ವಿನ್ ಡಿಸೋಜ, ಸೆರಿಲ್ ಡಿಸೋಜ, ಬಸರಿಕಟ್ಟೆ; 6. ಸುಮ, ಎಸ್. ಆರ್. ಶ್ರೀನಿವಾಸಗೌಡ, ಹಾಲ್ಮುತ್ತೂರು; 7. ನಿರ್ಮಲಾ, ತಿಮ್ಮಪ್ಪ ಶೆಟ್ಟಿ, ಬಾಳಗಡಿ; 8. ಬಾಲಚಂದ್ರ, ಶ್ರೀನಿವಾಸಯ್ಯ, ಸೂರ್ಯದೇವಸ್ಥಾನ; 9. ಅರವಿಂದ ಗುರ್ಜರ್, ಗೋಪಾಲಕೃಷ್ಣ ಗುರ್ಜರ್, ಬಾಳಗಡಿ.

(ನಮ್ಮ 7.12.86ರ ಸಂಚಿಕೆಯಲ್ಲಿ ಪ್ರಕಟವಾದ ಈ ಬಗೆಗಿನ ವರದಿಯಲ್ಲಿ ಕೆಲ ಹೆಸರುಗಳು ತಪ್ಪಾಗಿರುವ ಬಗ್ಗೆ ವಿಷಾದಿಸುತ್ತೇವೆ. —ಸಂ)

ದರ್ಖಾಸ್ತು ಕಡತ ವಿಲೇವಾರಿ ಆಗ್ರಹಿಸಿ ಡಿಎಫ್‌ಒ ಕಚೇರಿ ಎದುರು ಸಿಪಿಐ ಧರಣಿ

ಕೊಪ್ಪ: ಮಾಲ್ಕಿ ನಿಗದಿಗಾಗಿ ತಾಲ್ಲೂಕು ಕಛೇರಿಗಳಿಂದ ಅರಣ್ಯ ಇಲಾಖೆಗೆ ರವಾನಿಸಲ್ಪಟ್ಟು ಹತ್ತಾರು ವರ್ಷಗಳಿಂದ ವಿಲೇವಾರಿಯಾಗದೆ ಉಳಿದಿರುವ ಬಡ ರೈತ–ರೈತ ಕಾರ್ಮಿಕರ ಎಲ್ಲಾ ದರ್ಖಾಸ್ತು ಕಡತಗಳನ್ನು ಕೊಡಲೇ ವಿಲೇವಾರಿ ಮಾಡಬೇಕೆಂದು ಒತ್ತಾಯಿಸಿ ಭಾರತ ಕಮ್ಯುನಿಸ್ಟ್ ಪಕ್ಷದ ಬಿ. ಎಚ್. ಕೈಮರ ಮತ್ತು ಕೊಪ್ಪ ಘಟಕಗಳ ನೇತೃತ್ವದಲ್ಲಿ ಡಿ. 5ರಂದು ಇಲ್ಲಿನ ವಿಭಾಗ ಅರಣ್ಯಾಧಿಕಾರಿಗಳ ಕಚೇರಿಯೆದುರು ಸಾಂಕೇತಿಕ ಧರಣಿ ನಡೆಯಿತು.

ಧರಣಿಕಾರರಿಂದ ಮನವಿ ಸ್ವೀಕರಿಸಿದ ಎ. ಸಿ ಎಫ್. ಅಪ್ಪಣ್ಣನವರು, ಈ ಎಲ್ಲಾ ಕಡತಗಳ ಒಂದು ವಿವರವಾದ ಪಟ್ಟಿಯನ್ನು ಸಲ್ಲಿಸುವಂತೆ ಸೂಚಿಸಿ, ಅದು ದೊರೆತ ತಕ್ಷಣ ಅತ್ಯಂತ ಆದ್ಯತೆಯಲ್ಲಿ ಅವುಗಳನ್ನು ವಿಲೇವಾರಿ ಮಾಡುವ ಭರವಸೆ ಕೊಟ್ಟರು.

ಸಾ| ಶಿ| ಇ| ಲಿಪಿಕ ನೌಕರ[illegible] ಅನಿರ್ದಿಷ್ಟ ಕಾಲದ 'ಲೇಖನಿ ಸ್ಥಗಿತ' ಮುಷ್ಕರ[illegible]

ಕೊಪ್ಪ: ಸಾರ್ವಜನಿಕ ಶಿಕ್ಷಣ ಇಲಾ[illegible] ಯ ಲಿಪಿಕ ನೌಕರರ ಸಂಘ ಕಳೆದ ಮಾ[illegible] 23ರಿಂದ ನಡೆಸಿದ ಅನಿರ್ದಿಷ್ಟ ಕಾಲದ ಲೇ[illegible] ನಿ ಸ್ಥಗಿತ ಮುಷ್ಕರವನ್ನು ಹಿಂತೆಗೆ[illegible] ಕೊಳ್ಳುವಂತೆ ಆಗಿನ ಶಿಕ್ಷಣ ಮಂತ್ರಿ ಎಂ[illegible] ರಘುಪತಿ, ಶಿಕ್ಷಣ ಇಲಾಖೆ ಕಾರ್ಯದರ್ಶಿ[illegible] ಇಲಾಖಾ ಆಯುಕ್ತರು ಮನವಿ ಮಾಡಿ[illegible] ಸಂದರ್ಭದಲ್ಲಿ ಅವರು ಮೂರು ತಿಂಗಳೊ[illegible] ಗಾಗಿ ಈಡೇರಿಸುವುದಾಗಿ ಮಾತು ಕೊಟ್ಟಿ[illegible] ಸಂಘದ ಮೂರು ಪ್ರಮುಖ ಬೇಡಿಕೆಗಳ[illegible] ಇನ್ನೂ ಇತ್ಯರ್ಥವಾಗದೇ ಉಳಿದಿದ್ದು, ಅ[illegible] ಈಡೇರುವವರೆಗೂ ಅನಿರ್ದಿಷ್ಟ ಕಾಲ[illegible] ಲೇಖನಿ ಸ್ಥಗಿತ ಮುಷ್ಕರವನ್ನು ಲಿಪಿ[illegible] ನೌಕರರ ಸಂಘ ಡಿ. 8ರಿಂದ ಪುನರಾರಂಭಿಸಿ[illegible]

ಸಿ ಅಂಡ್ ಡಿ ಸರ್ವೆ, 'ಪೋಲೀಸ್ ದೌರ್ಜನ್ಯ' ವಿರೋಧಿಸಿ ಬಿಜೆಪಿ ಚಳುವಳಿ - ಕ್ಷೀಣ ಪ್ರತಿಕ್ರಿಯೆ

ಕೊಪ್ಪ: ಮಲೆನಾಡಿನ ಕೃಷಿ 'ಯೋಗ್ಯ'ವಾದ ಭೂಮಿಯನ್ನು 'ಸಿ ಅಂಡ್ ಡಿ' (ಅಂದರೆ ಯಾವುದೇ ಕೃಷಿ ಬೆಳೆ ಬೆಳೆಯಲು ಅನುಪಯುಕ್ತ) ಎಂದು ವರ್ಗೀಕರಿಸಲು ಅರಣ್ಯ ಇಲಾಖೆ ನಡೆಸುತ್ತಿರುವ ಸರ್ವೆ ಕಾರ್ಯ ವ್ಯಾಪಕವಾಗಿ ರೈತರ ಹಿತಾಸಕ್ತಿಗಳಿಗೆ ಮಾರಕವಾಗಿರುವುದನ್ನು ಪ್ರತಿಭಟಿಸಲು ಹಾಗೂ ತಾಲ್ಲೂಕಿನಾದ್ಯಂತ ಪೋಲೀಸರ ದೌರ್ಜನ್ಯ ಎಲ್ಲೆ ಮೀರಿದೆಯೆಂದು ಆಪಾದಿಸಿ, ತಾ|| ಬಿಜೆಪಿ ಡಿ. 10ರಂದು ಶಾಸಕ ಕರಂಬಳ್ಳಿ ಸಂಜೀವ ಶೆಟ್ಟರ ನೇತೃತ್ವದಲ್ಲಿ ಸಭೆ, ಮೆರವಣಿಗೆ ಮತ್ತು ತಾ|| ಕಚೇರಿ ಎದುರು ಸಾಂಕೇತಿಕ ಧರಣಿ ನಡೆಸಿತು.

ಸಭೆಯ ಅಧ್ಯಕ್ಷತೆ ವಹಿಸಿದ್ದ ಸಂಜೀವ ಶೆಟ್ಟರು, ಸರ್ಕಾರವು 'ಸಿ ಮತ್ತು ಡಿ' ಭೂ[illegible] ಮಿಯನ್ನು ಬಿರ್ಲಾ ಸಹಭಾಗಿತ್ವದ 'ಕರ್ನಾ[illegible] ಟಕ ಪಲ್ಪ್‌ವುಡ್ಸ್'ಗೆ ನೀಡಿರುವುದರಲ್ಲಿ[illegible] ಭಾರಿ ಭ್ರಷ್ಟಾಚಾರ ನಡೆದಿರುವ ಶಂ[illegible] ಯನ್ನು ವ್ಯಕ್ತಪಡಿಸಿದರು.

ಆಸ್ಪತ್ರೆಗಳಿಗೆ ಅವಶ್ಯಕ ಔಷಧಗಳ ಸ[illegible] ಬರಾಜನ್ನು ಹೆಚ್ಚಿಸಬೇಕು; ರೈತರ ಕೃಷಿ[illegible] ಉತ್ಪನ್ನಗಳಿಗೆ ನ್ಯಾಯವಾದ ಬೆಲೆ ನಿಗದಿ[illegible] ಪಡಿಸಬೇಕು; ರೈತರಿಂದ ವಸೂಲು ಮಾಡು[illegible] ವ ನೀರಿನ ತೆರಿಗೆ ಮನ್ನಾ ಮಾಡಬೇಕು[illegible] ವಾಣಿಜ್ಯ ಬ್ಯಾಂಕುಗಳಲ್ಲಿ ವಾರದರಜಾ ದಿನ[illegible] ವಲ್ಲದೆ ಈಚೆಗೆ ಜಾರಿಗೆ ತಂದಿರುವ[illegible] ಇನ್ನೊಂದು ದಿನದ ನಗದು ವಹಿವಾಟಿನ[illegible] ನಿಲುಗಡೆಯನ್ನು ರದ್ದು ಪಡಿಸಬೇಕು[illegible] ಹಾಗೂ ಕೊಪ್ಪ ಪುರಸಭೆಯ 5 ಕಿ.ಮೀ[illegible] ವ್ಯಾಪ್ತಿಯಲ್ಲಿ ಭೂರಹಿತರು ಮುಂತಾ[illegible] ವರು ಬಗರ್‌ಹುಕುಂ ಮಾಡಿರುವ ಪ್ರದೇ[illegible] ವನ್ನು ಖಾಯಂಗೊಳಿಸಬೇಕು ಎಂ[illegible] ಬೇಡಿಕೆಗಳನ್ನೂ ಬಿಜೆಪಿ ಈ ಸಂದರ್ಭದಲ್ಲಿ[illegible] ಮುಂದಿಟ್ಟಿತ್ತು.

ಆದರೆ ಕರಂಬಳ್ಳಿಯಂಥವರ ನೇತೃತ್ವ[illegible] ವಿದ್ದೂ ಕೂಡ, ಈ ಕಾರ್ಯಕ್ರಮಗಳಲ್ಲಿ[illegible] ಭಾಗವಹಿಸಬೇಕಾಗಿದ್ದ ರೈತರು, ಜನಸ[illegible] ಮಾನ್ಯರು ಮತ್ತಿತರ 'ನೊಂದವರ' ಪ್ರ[illegible] ಕ್ರಿಯೆ ಮಾತ್ರ ತೀರಾ ಕ್ಷೀಣವಾಗಿದ್ದುದ[illegible] ಎದ್ದು ಕಾಣುತ್ತಿತ್ತು.

ಕೊಪ್ಪದ ಮೈಸೂರು ಬ್ಯಾಂಕಿನಲ್ಲೊಂದು ವಂಚನೆ ಪ್ರಕರಣ; 45 ಸಾವಿರ ಗುಳುಂ ?

ಕೊಪ್ಪ: ಇಲ್ಲಿನ ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಶಾಖೆಯಲ್ಲಿ ಪಿಗ್ಮಿ ಸಂಗ್ರಾಹಕನಾಗಿದ್ದ ಎಚ್.ಎಸ್. ಪ್ರಕಾಶ ಹಂಡೆ ಎಂಬವ ಕಳೆದೊಂದು ವರ್ಷದಿಂದ ಗ್ರಾಹಕರಿಂದ ಸಂಗ್ರಹಿಸಿದ ಪಿಗ್ಮಿ ಹಣವನ್ನು ಸರಿಯಾಗಿ ಬ್ಯಾಂಕಿಗೆ ಕಟ್ಟದೇ ನುಂಗಿ ಹಾಕಿರುವ ಪ್ರಕರಣ ಬೆಳಕಿಗೆ ಬಂದಿದೆ.

ಒಂದು ಅನಧಿಕೃತ ಅಂದಾಜಿನ ಪ್ರಕಾರ ಈತ ದುರುಪಯೋಗಪಡಿಸಿರುವ ಹಣ ಸುಮಾರು 45 ಸಾವಿರ ರೂ ಗಳವರೆಗೆ ಆಗಬಹುದೆನ್ನಲಾಗಿದೆ.

ಈಗ ಈತನನ್ನು ಕೆಲಸದಿಂದ ತೆಗೆಯಲಾಗಿದ್ದು, ಗ್ರಾಹಕರು ಕಳ್ಕೊಂಡಿರಬಹುದಾದ ಹಣದ ಪೂರ್ಣ ಮರುಪಾವತಿಗೆ ತಕ್ಕ ಕ್ರಮ ಕೈಗೊಂಡಿರುವುದಾಗಿಯೂ, ಮುಂದಿನ ಕ್ರಮದ ಬಗ್ಗೆ ಮೇಲಧಿಕಾರಿಗಳು ಪರಿಶೀಲಿಸುವರೆಂದೂ ಶಾಖಾ ಮ್ಯಾನೇಜರ್ ತಿಳಿಸಿದ್ದಾರೆ

ಅರ್ಧ ಬೆಲೆಗೆ 'ಇಂದಿರಾ ವಿಕಾಸ ಪತ್ರ'

ಕೇಂದ್ರ ಸರ್ಕಾರದವರು ಕಳೆದ ನವೆಂಬರ್ 19ರಿಂದ ಎಲ್ಲಾ ಮುಖ್ಯ ಅಂಚೆ ಕಛೇರಿ ಮತ್ತು ಉಪಅಂಚೆ ಕಛೇರಿಗಳಲ್ಲಿ 'ಇಂದಿರಾ ವಿಕಾಸ ಪತ್ರ' ಎಂಬ ಉಳಿತಾಯ ಸರ್ಟಿಫಿಕೇಟನ್ನು ಮಾರಲು ವ್ಯವಸ್ಥೆ ಮಾಡಿದ್ದಾರೆ. ಸರ್ಟಿಫಿಕೇಟ್‌ಗಳನ್ನು ಅದರ ಮುಖ ಬೆಲೆಯ ಅರ್ಧಬೆಲೆಗೆ ಅಂದರೆ500 ರೂ. ಗಳ ಸರ್ಟಿಫಿಕೇಟ್ 250ರೂ. ಗಳಿಗೆ ಮಾರಲಾಗುವುದು. ಕೇವಲ 5 ವರ್ಷಗಳಲ್ಲಿ ತೊಡಗಿಸಿದ ಹಣ ಇಮ್ಮಡಿಯಾಗಿ ದೊರಕುವುದು. ಪತ್ರಗಳು 500 ರೂ. ಮತ್ತು 1000ರೂ.ಗಳ ಎರಡು ಶ್ರೇಣಿಗಳಲ್ಲಿ ದೊರೆಯುತ್ತವೆ. ಸಂಘಸಂಸ್ಥೆಗಳೂ ಕೂಡ ಹಣವನ್ನು ಈ ಯೋಜನೆಯಲ್ಲಿ ತೊಡಗಿಸಬಹುದು.

ವಿವಿಧ ಇಲಾಖೆಗೆ ನಿಗದಿಪಡಿಸಿರುವ ಸಣ್ಣ ಉಳಿತಾಯ ಗುರಿಯನ್ನು ಮೀರಿ ಪ್ರಗತಿ ಸಾಧಿಸುವಲ್ಲಿ ಸಿಬ್ಬಂದಿ ವರ್ಗದವರು ಸಂಘಸಂಸ್ಥೆಗಳು ಮತ್ತು ಸಾರ್ವಜನಿಕರಿಂದ ಹೆಚ್ಚಿನ ಸಂಖ್ಯೆಯಲ್ಲಿ ಈ ಸರ್ಟಿಫಿಕೇಟ್‌ಗಳನ್ನು ಖರೀದಿಸುವ ಮೂಲಕ ಈ ಜಿಲ್ಲೆಗೆ ನಿಗದಿಪಡಿಸಿರುವ ಹೆಚ್ಚಿನ 2 ಕೋಟಿ ಸಣ್ಣ ಉಳಿತಾಯದ ಗುರಿಯನ್ನು ಮೀರಿ ಸಾಧಿಸಲು ಸಹಕರಿಸುವಂತೆ ಜಿಲ್ಲಾಧಿಕಾರಿ ಬಿ. ಪಾರ್ಥಸಾರಥಿ ಕೋರಿದ್ದಾರೆ.

ಯುವಜನ ಫೆಡರೇಶನ್ ಜಿಲ್ಲಾ ಸಮ್ಮೇಳನ

ಚಿಕ್ಕಮಗಳೂರು: ಅಖಿಲ ಭಾರತ ಯುವಜನ ಫೆಡರೇಶನ್ನಿನ ಚಿಕ್ಕಮಗಳೂರು ಜಿಲ್ಲಾ ಮೊದಲನೇ ಸಮ್ಮೇಳನ ಈಚೆಗೆ ಇಲ್ಲಿ ಎರಡು ದಿನಗಳ ಕಾಲ ನಡೆಯಿತು. ಜಿಲ್ಲೆಯ 6 ತಾಲ್ಲೂಕುಗಳಿಂದ 150 ಪ್ರತಿನಿಧಿಗಳು ಭಾಗವಹಿಸಿದ್ದರು. ದೇಶದ, ಮುಖ್ಯವಾಗಿ ಯುವಜನರ ಸಮಸ್ಯೆಗಳ ಪರಿಹಾರದ ಬಗ್ಗೆ ಸಮ್ಮೇಳನ ಹಲವು ಶಿಫಾರ್ಸುಗಳನ್ನು ಮಾಡಿ ನಿರ್ಣಯಗಳನ್ನು ಅಂಗೀಕರಿಸಿತು. ಜಿಲ್ಲಾ ಮಂಡಳಿಗಳಿಗೆ ಈ ಕೆಳಕಂಡವರ ಆಯ್ಕೆಯಾದರು:

ಓ.ಎಲ್ ಮಹೇಂದ್ರ, ವಕೀಲರು (ಅಧ್ಯಕ್ಷರು), ಎ.ಕೆ. ಶೋಭಾ, ಎಂ.ಕೆ. ಲಕ್ಷ್ಮಣ್(ಉಪಾಧ್ಯಕ್ಷರು), ಎಂ. ಮಹೇಶ್ (ಕಾರ್ಯದರ್ಶಿ), ಜಿ. ಶೈಲಜಾ, ಎಚ್.ಎಸ್ ಖಲಂದರ್(ಸಹ ಕಾರ್ಯದರ್ಶಿಗಳು), ಎಂ. ವಿ. ಶಾಂತಿನಾಥ್ (ಖಜಾಂಚಿ) ಮತ್ತು 7 ಜನ ಸದಸ್ಯರು.

ನಿಧನ

ಚಿ|ಕೊಳಲು ವೆಂಕಟಕೃಷ್ಣ ಹೆಬ್ಬಾರ್

ಬಸರಿಕಟ್ಟೆ: ಇಲ್ಲಿಗೆ ಸಮೀಪದ ಚಿತ್ತದಕೊಳಲಿನ ಜಮೀನ್ದಾರ್ ವೆಂಕಟಕೃಷ್ಣ ಹೆಬ್ಬಾರ್ ಡಿ.3ರಂದು ಅಲ್ಪ ಕಾಲದ ಅಸ್ವಸ್ಥತೆಯ ಬಳಿಕ ತಮ್ಮ 87ನೇ ವಯಸ್ಸಿನಲ್ಲಿ ನಿಧನರಾದರು.

1928ರಷ್ಟು ಹಿಂದೆಯೇ, ಅಂದರೆ ಬ್ರಾಹ್ಮಣರು ಕಾಫಿ ಬೆಳೆಯುವುದಿರಲಿ, ಕಾಫಿ ಕುಡಿಯುವುದು ಕೂಡ ಈಗಿನ ಮದ್ಯಪಾನದಂತೆ ಅಗೌರವದ ವಿಚಾರವಾಗಿದ್ದ ಕಾಲದಲ್ಲಿ ಹೆಬ್ಬಾರರು 'ಕಾಫಿ ಪ್ಲಾಂಟರ್' ಎನ್ನಿಸಿಕೊಂಡಿದ್ದವರು. ಚಿತ್ತದಕೊಳಲು ಗ್ರಾಮದ ಬಹುತೇಕ ಜಮೀನು ಹಿಂದೆ ಇವರದೇ ಆಗಿತ್ತು.

ಪಟೇಲರಾಗಿದ್ದ ಇವರ ಮನೆಯಲ್ಲೇ ತಾಲ್ಲೂಕ್ ಜಮಾಬಂದಿ ಆಗುವುದಿತ್ತು. ಕೊಡುಗೈ ದಾನಿಗಳಾಗಿದ್ದ ಇವರು ಹಲವು ಸಂಘ – ಸಂಸ್ಥೆ – ದೇವಸ್ಥಾನಗಳಿಗೆ ಪೋಷಕರಾಗಿದ್ದರು.

ಮೃತರು ಪತ್ನಿ, ಇಬ್ಬರು ಪುತ್ರರು, ಐವರು ಪುತ್ರಿಯರನ್ನು ಅಗಲಿದ್ದಾರೆ.

ಪರಿಸರ ಸಂರಕ್ಷಣೆ, ರಬ್ಬರ್ ಬೆಳೆಗೆ ಉತ್ತೇಜನಕ್ಕೆ ಶಂಪಾ ದೈತೋಟ ಕರೆ

ಉತ್ತಮೇಶ್ವರ: ಉಜಿರೆಯ 'ಕರ್ನಾಟಕ ರಬ್ಬರು ಕೃಷಿಕರ ಸಂಘ'ದ ಮುಖಂಡರೂ, ಬೆಳ್ತಂಗಡಿಯ ಪರಿಸರ ಸಂರಕ್ಷಣಾ ಸಮಿತಿಯ ಅಧ್ಯಕ್ಷರೂ ಆದ ಫ್ರೀಲಾನ್ಸ್ ಪತ್ರಕರ್ತ ಶಂಪಾ ದೈತೋಟ ಇವರು ಡಿ.3ರಂದು ಇಲ್ಲಿ ಸಮಾಜ ಬಾಂಧವರಿಗೆ ಪರಿಸರ ರಕ್ಷಣೆಯ ಮಹತ್ವ, ಅಗತ್ಯಗಳ ಮನವರಿಕೆ ಮಾಡಿಕೊಟ್ಟರು.

ಡಿ. 4ರಂದು ಮುತ್ತೊಳ್ಳಿ ಹರಿಜನ ಕಾಲೋನಿಯ 11 ಜನರು ತಮ್ಮ 11ಎಕರೆ ಬಂಜರು ಭೂಮಿಯಲ್ಲಿ ರಬ್ಬರು ಬೆಳೆ ಬೆಳೆಯಲು ಮುಂದೆ ಬಂದಾಗ ಶಂಪಾ, ಅವರಿಗೆ ಸೂಕ್ತ ಮಾರ್ಗದರ್ಶನ ನೀಡಿದರು. ಇವರಿಗೆ ಬೇಕಾದ ನೆರವನ್ನು ಒದಗಿಸಿಕೊಡಲು ಜೇಪುಗೋಡು ಶಿವಶಂಕರ ಮತ್ತು ವಿ. ಎಸ್. ಶೃಂಗೇಶ್ವರ ಮುಂದೆ ಬಂದರು. ಆರ್ಥಿಕ ನೆರವು ಮತ್ತು ಪ್ರೋತ್ಸಾಹ ಕೊಡುವುದಾಗಿ ಸ್ಥಳೀಯ ಮೈಸೂರು ಬ್ಯಾಂಕಿನ ಶಾಖಾಧಿಕಾರಿ ಟಿ. ರಾಮಚಂದ್ರ ಕುಮಾರ್ ಭರವಸೆ ಕೊಟ್ಟರು. ಸ್ಥಳೀಯ ಸ್ವಯಂ ಸೇವಾ ಕೇಂದ್ರವು ಈ ಬಗ್ಗೆ ಮಾರ್ಗದರ್ಶನ ಮತ್ತು ಯುಕ್ತ ಕಾರ್ಯಕ್ರಮಗಳನ್ನು ಹಮ್ಮಿಕೊಳ್ಳುವುದೆಂದು ನಿರ್ಣಯಿಸಲಾಯಿತು.

ಅಂತರ ಕಾಲೇಜು ಸ್ಪರ್ಧೆಗಳಿಗೆ ಪ್ರವೇಶ ಆಹ್ವಾನ

ನರಸಿಂಹರಾಜಪುರ: ಇಲ್ಲಿನ ಕಿರಿಯ ಕಾಲೇಜಿನಲ್ಲಿ ಪ್ರತಿವರ್ಷದಂತೆ ನಡೆಯುವ ಅಂತರ ಪ್ರೌಢಶಾಲೆ / ಕಿರಿಯ ಕಾಲೇಜು ಕನ್ನಡ ಚರ್ಚಾಸ್ಪರ್ಧೆ, ಭಾವಗೀತೆ ಮತ್ತು ಜನಪದ ಗೀತೆ ಸ್ಪರ್ಧೆಗಳಿಗೆ ಪ್ರವೇಶಗಳನ್ನು ಡಿ. 17ರೊಳಗೆ ಕಳುಹಿಸುವಂತೆ ಕೋರಲಾಗಿದೆ.



ಸ್ಟೇಟ್ ಬ್ಯಾಂಕ್ ಆಫ್ ಮೈಸೂರು

ಕೊಪ್ಪ, ಚಿಕ್ಕಮಗಳೂರು ಜಿಲ್ಲೆ

ಪ್ರಕಟಣೆ

ಸ್ಟೇಟ್ ಬ್ಯಾಂಕ್ ಆಫ್ ಮೈಸೂರು ಕೊಪ್ಪ ಶಾಖೆಯ ಪಿಗ್ಮಿ ಕಲೆಕ್ಟರ್ ಆಗಿದ್ದ ಶ್ರೀ ಎಚ್. ಎಸ್. ಪ್ರಕಾಶ್ ಹಂಡೆ ಬಿನ್ ಶ್ರೀ ಎಚ್. ಆರ್. ಶ್ರೀನಿವಾಸ ಹಂಡೆ, ಕೊಪ್ಪ, ಎಂಬವರು ಗ್ರಾಹಕರಿಂದ ಪಡೆದ ಹಣವನ್ನು ಬ್ಯಾಂಕಿಗೆ ಪಾವತಿ ಮಾಡದೇ ಗ್ರಾಹಕರನ್ನು ವಂಚಿಸುತ್ತಾ ಹಣವನ್ನು ದುರುಪಯೋಗ ಪಡಿಸಿಕೊಂಡಿರುವ ವಿಷಯ ಕೆಲವು ದಾಖಲೆಗಳೊಂದಿಗೆ ಬ್ಯಾಂಕಿನ ಅಧಿಕಾರಿಗಳ ಗಮನಕ್ಕೆ ಬಂದಿರುತ್ತದೆ. ಆದ್ದರಿಂದ ಸಾರ್ವಜನಿಕರು ಶ್ರೀ ಎಚ್. ಎಸ್ ಪ್ರಕಾಶ್‌ರವರಲ್ಲಿ ಇನ್ನು ಮುಂದೆ ಯಾವ ವಿಧವಾದ ಬ್ಯಾಂಕಿನ ವ್ಯವಹಾರಗಳನ್ನೂ ಮಾಡಬಾರದಾಗಿ ಕೋರಲಾಗಿದೆ. ಹಾಗೇನಾದರೂ ಯಾರಾದರೂ ಆತನೊಂದಿಗೆ ವ್ಯವಹರಿಸಿದಲ್ಲಿ ಅಂತಹ ವ್ಯವಹಾರಗಳಿಗೆ ಯಾವುದೇ ರೀತಿಯಲ್ಲೂ ಬ್ಯಾಂಕಿನವರು ಜವಾಬ್ದಾರರಲ್ಲವೆಂದು ಸಾರ್ವಜನಿಕರಿಗೆ ಈ ಮೂಲಕ ತಿಳಿಸುತ್ತೇವೆ ಬ್ಯಾಂಕಿನ ಮತ್ತು ಸಾರ್ವಜನಿಕರ ಹಿತದೃಷ್ಟಿಯಿಂದ ಶ್ರೀ ಎಚ್. ಎಸ್. ಪ್ರಕಾಶ್‌ರವರು ಪಿಗ್ಮಿ ಕಲೆಕ್ಷನ್ ಮಾಡುವುದನ್ನೂ ಸಹ ನಿಲ್ಲಿಸಲಾಗಿದೆ. ಸಾರ್ವಜನಿಕರ ಸಂಪೂರ್ಣ ಸಹಕಾರವನ್ನು ಈ ಮೂಲಕ ಕೋರಲಾಗಿದೆ.

(ಸಹಿ) **ಕೆ. ಟಿ. ಸಿ. ಶರ್ಮ,**
ವ್ಯವಸ್ಥಾಪಕರು,
ಸ್ಟೇಟ್‌ಬ್ಯಾಂಕ್ ಆಫ್ ಮೈಸೂರ್,
ಕೊಪ್ಪ ಶಾಖೆ.

ಕೊಪ್ಪ,
ದಿನಾಂಕ: 9-12-1986

ವೈಕುಂಠ ಸಮಾರಾಧನೆಗೆ ಆಹ್ವಾನ

ಪ್ರಿಯರೇ,

ಇದೇ ತಾ|| 3–12–1986ನೇ ಬುಧವಾರದಂದು

ಶ್ರೀಯುತ ಚಿತ್ತದಕೊಳಲು ವೆಂಕಟಕೃಷ್ಣ ಹೆಬ್ಬಾರ್

ರವರು ದೈವಾಧೀನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರ ಸದ್ಗತಿಗಾಗಿ ತಾ|| 16 – 12 – 86ನೇ ಮಂಗಳವಾರದಂದು (ಮಾರ್ಗಶಿರ ಶುದ್ಧ ಪೂರ್ಣಿಮಾ) ಚಿತ್ತದಕೊಳಲಿನಲ್ಲಿ ನಡೆಯುವ

ವೈಕುಂಠ ಸಮಾರಾಧನೆಗೆ

ತಾವುಗಳೆಲ್ಲರೂ ಆಗಮಿಸಿ, ಮೃತರಆತ್ಮಕ್ಕೆ ಶಾಂತಿಯನ್ನು ಕೋರಬೇಕಾಗಿ ಅಪೇಕ್ಷಿಸುವ ತಮ್ಮ ಆಗಮನಾಭಿಲಾಷಿ,

ಬಿ.ವಿ. ರಾಮಕೃಷ್ಣ ಹೆಬ್ಬಾರ್
ಚಿತ್ತದಕೊಳಲು.

(ಆಹ್ವಾನ ಪತ್ರಿಕೆ ತಲುಪಿಲ್ಲದವರು ಇದೇ ಆಹ್ವಾನವನ್ನು ಮನ್ನಿಸಿ ಈ ಕಾರ್ಯಕ್ರಮದಲ್ಲಿ ಭಾಗಿಗಳಾಗ ಬೇಕಾಗಿ ಕೋರಿಕೆ.)

ಸಂಪಾದಕ, ಮುದ್ರಕ ಮತ್ತು ಪ್ರಕಾಶಕ: ಸಿರಿಮನೆ ನಾಗರಾಜ್, ಅಚ್ಚು: ದೀಪಟಿಗೆ ಅಚ್ಚುಕೂಟ, ಕೊಪ್ಪ